# ಪ್ರಿಯಾಂಕಾ ಡ್ರೆಸ್‌ಕೋಡ್

ರಾಜಕೀಯ ಗಣ್ಯರ ಜತೆಗೆ ಭೇಟಿಯಾಗುವಾಗ ಹೆಣ್ಣುಮಕ್ಕಳು ಇಂತಹದ್ದೇ ಡ್ರೆಸ್ ಹಾಕಬೇಕೆಂಬ ನಿಯಮವಿದೆಯೆ.. ಎಂದು ಯಾರಾದರೂ ಕೇಳಿದರೆ, ಅದಕ್ಕೆ ಉತ್ತರ 'ಇಲ್ಲ' ಎನ್ನುವುದೇ ಆಗಿದೆ. ಆದರೆ ಭಾರತದ ಹೆಣ್ಣುಮಗಳೊಬ್ಬಳು ದೂರದ ಬರ್ಲಿನ್‌ನಲ್ಲಿ ಭಾರತದ ಪ್ರಧಾನಿಯೊಂದಿಗೆ ಮಾತುಕತೆಗೆ ಕುಳಿತಾಗ ಯಾವ ಡ್ರೆಸ್ ಹಾಕಿಕೊಳ್ಳಬೇಕು.. ಎನ್ನುವ ಪ್ರಶ್ನೆಯೀಗ ಸಾಮಾಜಿಕ ಜಾಲತಾಣದಲ್ಲಿ ಚರ್ಚೆಯ ಅಲೆಯೆಬ್ಬಿಸಿದೆ. ಈ ಬಿರುಸಿನ ಚರ್ಚೆಗೆ ಕಾರಣ ಪ್ರಿಯಾಂಕಾ ಚೋಪ್ರಾ ಮತ್ತು ಆಕೆಯ ಉಡುಗೆ. ಬರ್ಲಿನ್‌ನಲ್ಲಿ ಕಳೆದ ವಾರ ಭಾರತದ ಪ್ರಧಾನಿ ನರೇಂದ್ರ ಮೋದಿಯವರನ್ನು ಭೇಟಿಯಾದಾಗ ಪ್ರಿಯಾಂಕಾ ಮೊಣಕಾಲಿಗಿಂತ ಮೇಲೆ ಬರುವ ಡ್ರೆಸ್ ಧರಿಸಿದ್ದೇ ಅಲ್ಲದೆ, ಕಾಲ ಮೇಲೆ ಕಾಲು ಹಾಕಿ ಕುಳಿತಿದ್ದು ಈಗ ದೊಡ್ಡ ಸುದ್ದಿ. ಪ್ರಧಾನಿಯವರು ವಿದೇಶ ಪ್ರವಾಸ ಹೋಗಿದ್ದರೆ, ಪ್ರಿಯಾಂಕಾ ತಮ್ಮ ಹೊಸ ಹಾಲಿವುಡ್ ಚಿತ್ರದ ಪ್ರಚಾರಕ್ಕೆ ಬರ್ಲಿನ್‌ನಲ್ಲಿದ್ದರು.

ಸಾಮಾಜಿಕ ಜಾಲತಾಣದಲ್ಲಿ ಪ್ರಿಯಾಂಕಾ ವಿರುದ್ಧ ಟೀಕೆಗಳ ಸುರಿಮಳೆಯೇ ಬಿದ್ದಿದೆ. ಆದರೆ ಯಾವ ಟೀಕೆಗೂ ಪ್ರಿಯಾಂಕಾ ತಲೆ ಕೆಡಿಸಿಕೊಂಡಂತೆ ಕಾಣುತ್ತಿಲ್ಲ. ಟೀಕೆಯ ಬೆನ್ನಲ್ಲೇ ಪ್ರಿಯಾಂಕಾ ತನ್ನ ಮತ್ತು ತನ್ನ ಅಮ್ಮ ಮಧು ಚೋಪ್ರಾ ಅವರ ಜಂಟಿ ಫೋಟೊ ಒಂದನ್ನು ಸಾಮಾಜಿಕ ಜಾಲತಾಣಕ್ಕೆ ಹಾಕಿದ್ದು, ಅದರಲ್ಲಿ ಇಬ್ಬರೂ ತೊಡೆ ಕಾಣಿಸುವ ಉಡುಗೆಯಲ್ಲಿ ಕುಳಿತು ನಗುತ್ತಿದ್ದಾರೆ! ಹೀಗೆ ಮಾಡುವ ಮೂಲಕ ಪ್ರಿಯಾಂಕಾ, ಟೀಕಾಕಾರರ ವಿರುದ್ಧ ತಮ್ಮದೇ ರೀತಿಯಲ್ಲಿ ಪ್ರತಿಭಟಿಸಿದಂತಾಗಿದೆ.

'ಡ್ರೆಸ್‌ಕೋಡ್' ಬಗ್ಗೆ ಭಾರತದಲ್ಲಿ ಚರ್ಚೆ ಶುರುವಾಗಿ ಸಾಕಷ್ಟು ವರ್ಷಗಳೇ ಕಳೆದಿವೆ. ಅದಕ್ಕೆ ಒಂದು ಇದಮಿತ್ಥಂ ಎನ್ನುವ ಪರಿಹಾರ ಸಿಕ್ಕಿಲ್ಲ. ಸದ್ಯಕ್ಕಂತೂ 'ಡ್ರೆಸ್ ಅವರಿಷ್ಟ' ಎನ್ನುವುದೇ ನಿಯಮ. ಅದು ಸಹಜ ನಿಯಮವೂ ಹೌದು. ಪ್ರಿಯಾಂಕಾ ಈಗ ಬಾಲಿವುಡ್‌ನ 'ನಂಬರ್ ಒನ್' ನಟಿ. ಜತೆಗೆ ಹಾಲಿವುಡ್‌ನಲ್ಲೂ ಅತ್ಯಂತ ಜನಪ್ರಿಯ ಭಾರತೀಯ ತಾರೆ. ಆಕೆ ನಟಿಸಿದ 'ಬೇವಾಚ್' ಚಿತ್ರ ಈ ವಾರ ವಿಶ್ವದಾದ್ಯಂತ ಬಿಡುಗಡೆಯಾಗಿದೆ. ಹಾಲಿವುಡ್‌ನಲ್ಲಿ ಇನ್ನೂ ಒಂದು ಹೊಸ ಚಿತ್ರಕ್ಕೆ ಆಕೆ ಸಹಿ ಹಾಕಿದ್ದಾಳೆ. ಅಲ್ಲಿ ಆಕೆ ನಟಿಸುತ್ತಿರುವ ಟಿವಿ ಸರಣಿ ಅತ್ಯಂತ ಜನಪ್ರಿಯವಾಗಿದೆ. ಒಂದರ್ಥದಲ್ಲಿ ಆಕೆಯೀಗ ವಿಶ್ವಪ್ರಜೆ. ಒಂದೇ ವಾರದಲ್ಲಿ ಜಗತ್ತಿನ ಐದಾರು ದೇಶಗಳನ್ನು ಸುತ್ತಾಡಿರುವ ಪ್ರಿಯಾಂಕಾ, ಆಯಾ ದೇಶಗಳಲ್ಲಿ ಅಲ್ಲಿಯದೇ ಆದ ವಿಭಿನ್ನ ಉಡುಗೆ ಶೈಲಿಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಬರ್ಲಿನ್‌ನಲ್ಲಿ ಇದ್ದುದರಿಂದ ಪಾಶ್ಚಾತ್ಯ ಶೈಲಿಯ ಡ್ರೆಸ್ ಒಳ್ಳೆಯದು ಎಂದಾಕೆ ಅಂದುಕೊಂಡಿರುವ ಸಾಧ್ಯತೆಗಳಿವೆ. ಆಕೆಗೆ ಭಾರತದಲ್ಲಿ 'ಪದ್ಮಶ್ರೀ' ಪ್ರಶಸ್ತಿ ಸಿಕ್ಕಿದಾಗ, ದೆಹಲಿಯಲ್ಲಿ ಪ್ರಶಸ್ತಿ ಸ್ವೀಕಾರ ಸಮಾರಂಭದಲ್ಲಿ ಉದ್ದ ತೋಳಿನ ಸೀರೆ ಉಟ್ಟುಕೊಂಡು ಭಾರತೀಯ ಶೈಲಿಯಲ್ಲೇ ಪ್ರಶಸ್ತಿ ಸ್ವೀಕರಿಸಿದ್ದುಂಟು.

'ಆದರೆ ಸಾಮಾಜಿಕ ಜಾಲತಾಣದ ಟೀಕೆಗಳಿಗೆ ಉತ್ತರವಾಗಿ ಪ್ರಿಯಾಂಕಾ ಮರುದಿನ ಜಾಲತಾಣದಲ್ಲಿ ಅಮ್ಮ–ಮಗಳಿಬ್ಬರೂ ತೊಡೆ ತೋರುವ ಡ್ರೆಸ್‌ನಲ್ಲಿರುವ ಚಿತ್ರ ಹಾಕಿದ್ದು ಎಷ್ಟು ಸರಿ?' ಎನ್ನುವ ಪ್ರಶ್ನೆಗೆ ಉತ್ತರ ಕಷ್ಟ. ಇದು ಸ್ವಲ್ಪ ಅಹಂಕಾರದ ಪ್ರತಿಕ್ರಿಯೆ ಅನ್ನಿಸುತ್ತಿದೆ. ವಿಶ್ವಾದ್ಯಂತ ಲಕ್ಷಾಂತರ ಅಭಿಮಾನಿಗಳನ್ನು ಹೊಂದಿರುವ ಪ್ರಿಯಾಂಕಾ 'ಬೇವಾಚ್' ಸಿನಿಮಾದಲ್ಲಿ ಹಾಕಿಕೊಂಡಿರುವ ಬಿಕಿನಿ ಡ್ರೆಸ್‌ಗಳ ಬಗ್ಗೆ ಯಾರ ತಕರಾರೂ ಇದ್ದಂತಿಲ್ಲ. ಏಕೆಂದರೆ ಅದು ಸಿನಿಮಾ! ಬರ್ಲಿನ್‌ನಲ್ಲೂ ಯಾರೂ ಪ್ರಿಯಾಂಕಾ ಡ್ರೆಸ್ ಬಗ್ಗೆ ತಲೆಕೆಡಿಸಿಕೊಂಡಂತಿಲ್ಲ. ಆದರೆ ಭಾರತದಲ್ಲಿ ಪ್ರಧಾನಿಯವರ ಅಭಿಮಾನಿಗಳಿಗಂತೂ ಸಿಟ್ಟು ಬಂದಿರುವುದು ನಿಜ.

ಪ್ರಿಯಾಂಕಾ ಹಿಂದಿನಿಂದಲೂ ಸ್ತ್ರೀವಾದದ ವಕ್ತಾರೆ. 'ಹಿಂದೂಸ್ತಾನ್ ಟೈಮ್ಸ್' ನಲ್ಲಿ ಪ್ರತಿ ವಾರ ಅಂಕಣಕಾರ್ತಿ ಆಗಿದ್ದಾಗ ಡ್ರೆಸ್‌ಕೋಡ್ ಸಹಿತ ಹೆಣ್ಣುಮಕ್ಕಳ ಕುರಿತ ಹಲವು ವಿಷಯಗಳನ್ನು ಈಕೆ ಚರ್ಚಿಸಿದ್ದಿದೆ. 10 ವರ್ಷಗಳ ಕಾಲ ಯುನಿಸೆಫ್ ಗೆ ಕೆಲಸ ಮಾಡಿ ಮಕ್ಕಳ ಹಕ್ಕುಗಳ ರಾಯಭಾರಿ ಆಗಿದ್ದೂ ಇದೆ. ಆಸ್ಕರ್ ಪ್ರಶಸ್ತಿ ಸಮಾರಂಭಕ್ಕೂ ಪ್ರಿಯಾಂಕಾ ಬೇಕು. 'ಟೈಮ್' ಮ್ಯಾಗಸಿನ್ ಪ್ರಕಟಿಸಿದ ಪ್ರಪಂಚದ 100 ಪ್ರಭಾವಶಾಲಿ ವ್ಯಕ್ತಿಗಳ ಪಟ್ಟಿಯಲ್ಲಿ ಈಕೆಯ ಹೆಸರಿದೆ.

ವಿವಾದಗಳು ಏನೇ ಇರಲಿ, ಪ್ರಿಯಾಂಕಾ ಯಶಸ್ವಿ ನಟಿ ಮತ್ತು ನಿರ್ಮಾಪಕಿ. ಈಕೆ ನಟಿಸಿದ 'ಮೇರಿ ಕೋಮ್' ಖ್ಯಾತಿ ತಂದುಕೊಟ್ಟಿತು. ಶೀಘ್ರವೇ ಗಗನಯಾತ್ರಿ ಕಲ್ಪನಾ ಚಾವ್ಲಾ ಮತ್ತು ಕವಯಿತ್ರಿ ಅಮೃತಾ ಪ್ರೀತಂ ಪಾತ್ರಗಳಲ್ಲೂ ನಟಿಸುತ್ತಿದ್ದಾಳೆ. ಅತ್ಯುತ್ತಮ ನಟನೆಗಾಗಿ ಒಮ್ಮೆ ರಾಷ್ಟ್ರೀಯ ಪ್ರಶಸ್ತಿ ಮತ್ತು ಐದು ಬಾರಿ ಫಿಲಂ ಫೇರ್ ಪ್ರಶಸ್ತಿ ಪಡೆಯುವುದೆಂದರೆ ಸುಮ್ಮನೆ ಅಲ್ಲ!

**Elle.com** ಪತ್ರಿಕೆಯಲ್ಲಿ ಹಿಂದೆ ಬರೆಯುತ್ತಿದ್ದ ಕಾಲಂನಲ್ಲೂ ಪ್ರಿಯಾಂಕಾ, 'ಜಾಗತಿಕ ಪ್ರಜೆ'ಯ ಕುರಿತು ಚರ್ಚಿಸಿದ್ದಿದೆ. ಸಿನಿಮಾ ಪತ್ರಿಕೆಗೆ ನೀಡಿದ ಸಂದರ್ಶನವೊಂದರಲ್ಲಿ, 'ನನ್ನ ಮದುವೆ ಜಾಗತಿಕವಾಗಿಯೇ ನಡೆಯಬೇಕು. ಪಂಜಾಬಿನಲ್ಲಿ ಅಜ್ಜನ ಮನೆಯಲ್ಲಿ ಭಾರತೀಯ ಸಾಂಪ್ರದಾಯಿಕ ಶೈಲಿಯ ಮದುವೆ, ಬಳಿಕ ಸಮುದ್ರದ ಕೆಳಗೆ ನೀರಿನಲ್ಲಿ ಮದುವೆ, ಸ್ವಿಟ್ಝರ್ಲಂಡ್ ಮತ್ತು ಲಾಸ್ ವೇಗಾಸ್‌ನ ಚರ್ಚ್‌ನಲ್ಲಿ ಮದುವೆ, ಮುಸ್ಲಿಮರ ನಿಖಾಹ್ ಮಾದರಿಯಲ್ಲಿ ಮದುವೆ– ಹೀಗೆ ಒಟ್ಟು ಆರು ಸಲ ಮದುವೆ ಆಗಬೇಕು ಎನ್ನುವುದು ನನ್ನ ಕನಸು' ಎಂದು ಪ್ರಿಯಾಂಕಾ ಹೇಳಿದ್ದಿದೆ. ಇಷ್ಟೊಂದು ದೊಡ್ಡ ಮಟ್ಟದಲ್ಲಿ ಜಾಗತಿಕವಾಗಿ ಚಿಂತಿಸುವ ಹೀರೋಯಿನ್, ಪ್ರಧಾನಿ ಭೇಟಿಯ ವೇಳೆ ಧರಿಸಿದ ಸಣ್ಣ ಡ್ರೆಸ್ ಬಗ್ಗೆ ಚರ್ಚೆ ನಡೆಸುವುದು 'ಸಣ್ಣತನ' ಆಗಲಿಕ್ಕಿಲ್ಲವೆ? ■



Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65